is progressing at a faster rate. This power transformer will be commissioned very shortly.

During the period from April 93 to January 1994, seventy six numbers of 25 KVA, fifty four numbers of 63 KVA and twenty eight number of 100 KVA distribution transformers have been supplied to Bailhongal division from Bangalore. During the same period, 72 Kms of Squirrel conductor, 140 Nos. of Veasel conductors were also supplied. Taking into consideration the requirment of this division, action will be taken to supply more numbers of distribution transformers and other essential materials.

ಶ್ರೀ ವಾಟಾಳ್ ನಾಗರಾಜ್ : ಮಂತ್ರಿಗಳು ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದಾರೆ. ಮಂತ್ರಿಗಳೇ ಹೀಗೆ ದಾರಿ ತಪ್ಪಿದರೆ ಹೇಗೆ?

ಅಧ್ಯಕ್ಷರು : ಅವರು ಉತ್ತರವನ್ನು ಕನ್ನಡದಲ್ಲಿ ಒದಗಿಸಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಅವರು ಯಾವ ಭಾಷೆಯಲ್ಲಿ ಹೇಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಅವರು ಯಾವ ಭಾಷೆಯಲ್ಲಿ ಯಾರಿಗೆ ಹೇಳುತ್ತಿದ್ದಾರೆ. ಮಾನ್ಯ ಕೌಜಲಗಿಯವರು ಕನ್ನಡದಲ್ಲಿ ಸ್ಪಷ್ಟವಾಗಿ ಕೇಳಿದ್ದಾರೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಗವರ್ನರ್ ಓದಿದ ಹಾಗೆ ಓದುತ್ತಿದ್ದಾರೆ.

ಶ್ರೀ ಕೆ. ಎ. ನಿಸಾರ್ ಅಹಮದ್ : ಕನ್ನಡ ಕಲಿಯುತ್ತಿದ್ದೇನೆ. ಕನ್ನಡದಲ್ಲಿ ಓದಲು ಸ್ವಲ್ಪ ನಿಧಾನವಾಗುತ್ತದೆ. ಮುಂದೆ ಕನ್ನಡದಲ್ಲಿ ಓದುತ್ತೇನೆ.

ಅಧ್ಯಕ್ಷರು : ಸಭೆಯು ಈಗ ಎದ್ದು 3 ಗಂಟೆಗೆ ಮತ್ತೆ ಸೇರುತ್ತದೆ.

(ಸಭೆಯು ಪುನಃ 3.30ಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಹೆಚ್. ಬನ್ನಿಕೋಡ್ : ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಒಂದು ನಿಲುವಳಿ ಸೂಚನೆ ಕಳಿಸಿದ್ದೆ. ಇಂದು ಉತ್ತರ ಕೊಡುತ್ತೇವೆಂದು ಹೇಳಿದ್ದರು. ಅದರಂತೆ ಇಂದು ಉತ್ತರ ಕೊಡಬೇಕು.

ಮುಖ್ಯಮಂತ್ರಿಗಳ ಹೇಳಿಕೆ

ದಿನಾಂಕ 12-2-94ರಂದು ವಾಲ್ಮೀಕಿ ಜಯಂತಿ ಉತ್ಸವದ ನಿಮಿತ್ತ ಮುಖ್ಯಮಂತ್ರಿಗಳ ಕಾರ್ಯಕ್ರಮದ ಕಾಲಕ್ಕೆ ಕಟ್ಟಡ ಕುಸಿದುದ್ದರಿಂದ ಉಂಟಾದ ಅನಾಹುತದ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ತಾವು ಅನುಮತಿ ಕೊಟ್ಟರೆ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಅಧ್ಯಕ್ಷರು : ಆಗಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಹಿರೇಕೆರೂರು ಪಟ್ಟಣದಲ್ಲಿ ದಿನಾಂಕ 12.2.1994 ರಂದು ಮಹರ್ಷಿ ವಾಲ್ಮೀಕಿ ಜಯಂತಿ [illegible] ಕಾರ್ಯಕ್ರಮದಲ್ಲಿ

ನಾನು ಮತ್ತು ಇತರೆ ಗಣ್ಯವ್ಯಕ್ತಿಗಳು ಭಾಗವಹಿಸಿ, ಕಾರ್ಯಕ್ರಮ ಮುಗಿದ ನಂತರ, ಗಂಗಾವತಿಗೆ ಹೊರಡುವ ಸಂದರ್ಭದಲ್ಲಿ ಅನೇಕ ಜನರು ಹಾಗೂ ಮಕ್ಕಳು ಸುತ್ತಲೂ ನಿಂತಿದ್ದರಲ್ಲದೆ ಕೆಲವರು ಸಮಮೀಪದಲ್ಲಿರುವ ಹಿರೆಕೆರೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಮುನ್ಸೀಫ್ ಮತ್ತು ಜೆ.ಎಂ.ಎಫ್. ನ್ಯಾಯಾಲಯದ ಕಟ್ಟಡದ ಮೇಲ್ಛಾವಣಿ ಮೇಲೆ ಸುಮಾರು 200 - 300 ಜನ ಮಕ್ಕಳು ನಿಂತಿದ್ದಾಗ, ಜನರ ನೂಕುನುಗ್ಗಲಿನಿಂದಾಗಿ ಕಟ್ಟಡದ ಮೇಲ್ಛಾವಣಿಯ ಮೇಲೆ ಬಲಬದಿಯಲ್ಲಿ ಇರುವ ಫ್ಯಾರಾಪೂಟ ಗೋಡೆ ಜನರ ಮತ್ತು ಮಕ್ಕಳ ನೂಕುನುಗ್ಗಲು ಮತ್ತು ಅತೀಭಾರದಿಂದ ಕುಸಿದು ಬಿದ್ದು ಗಾಯಗೊಂಡಿರುತ್ತಾರೆ. ಇವರನ್ನು ಹಿರೇಕೆರೂರು ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಿ, ಪ್ರಥಮ ಚಿಕಿತ್ಸೆ ಕೊಡಿಸಲಾಯಿತು. ಈ ಪೈಕಿ, ಕುಮಾರಿ ರೇಶ್ಮಾ ಎಂಬ ಹೆಣ್ಣು ಮಗು ಮೃತಪಟ್ಟಿದ್ದಾಳೆಂದು ಆಗಲೇ ತಿಳಿಯಿತು. ಉಳಿದ 42 ಜನ ಗಾಯಾಳುಗಳಿಗೆ ವೈದ್ಯಕೀಯ ಚಿಕಿತ್ಸೆ ನೀಡುವ ಸಲುವಾಗಿ ದಾವಣಗೆರೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಗೆ ಕಳುಹಿಸಲಾಯಿತು. ಇವರಲ್ಲಿ ವಿಕನಾಥ ಬಳ್ಳಾರಿ ಎಂಬ ಪೊಲೀಸ್ ಪೇದೆಗೂ ಕೂಡಾ ಗಾಯವಾಗಿದೆ. ಇವರಲ್ಲಿ 5 ಜನ ಗಾಯಾಳುಗಳ ಪರಿಸ್ಥಿತಿ ಗಂಭೀರ ಎಂದು ತಿಳಿದು ಬಂದಿದ್ದರಿಂದ, ಅವರನ್ನು ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕಳುಹಿಸಲಾಯಿತು. ಅವರಲ್ಲಿ ಒಬ್ಬರಾದ ಶ್ರೀ ರುದ್ರಗೌಡ ಎಂಬುವವರು ದಿನಾಂಕ 13.2.1994 ರಂದು ಮಧ್ಯಾಹ್ನ 2.25 ಗಂಟೆಗೆ ಮೃತಪಟ್ಟಿದ್ದಾರೆಂದು ಮಾಹಿತಿ ಬಂದಿದೆ. ಈ ಇಬ್ಬರೂ ಮೃತಪಟ್ಟವರಲ್ಲದೇ 9 ಜನರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ. ಇದಲ್ಲದೆ 32 ಜನರಿಗೆ ಸಾದಾ ಸ್ವರೂಪದ ಗಾಯಗಳಾಗಿವೆ. ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ.

ಈ ಘಟನೆಯನ್ನು ವಿಶೇಷ ಘಟನೆ ಎಂದು ಪರಿಗಣಿಸಿ, ಮೃತರಾದ ಕುಮಾರಿ ರೇಶ್ಮಾ ಮತ್ತು ಶ್ರೀ ರುದ್ರಗೌಡ ಇವರ ಕುಟುಂಬದ ವಾರಸುದಾರರಿಗೆ ತಲಾ ಒಂದು ಲಕ್ಷ ರೂಪಾಯಿಗಳ ಪರಿಹಾರ ನೀಡಲಾಗುವುದು. ಗಾಯಗೊಂಡವರಿಗೆ ಪ್ರತಿಯೊಬ್ಬರ ಗಾಯದ ತೀವ್ರತೆಯ ಸ್ವರೂಪಕ್ಕನುಗುಣವಾಗಿ ಸೂಕ್ತ ಪರಿಹಾರವನ್ನು ನೀಡುವಂತೆ ಧಾರವಾಡ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಇನ್ನು ಇತರ ಗಾಯಾಳುಗಳಿಗೆ ಕೂಡ ನಾವು ಪರಿಹಾರ ಕೊಡುತ್ತೇನೆ. ಸರಿಯಾದ ಮಾಹಿತಿ ಬಂದ ಕೂಡಲೇ ಕೊಡುತ್ತೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅನೇಕ ಮಕ್ಕಳ ಕಾಲುಗಳು ಮುರಿದಿವೆ; ಕೈಗಳು ಮುರಿದಿವೆ; ಕಣ್ಣು ಹೋಗಿದೆ. ಅದಕ್ಕಾಗಿ ಯಾರಿಗೆ ಅಂಗವಿಕಲತೆ ಆಗಿದೆ ಅಥವಾ ಡಿಸ್ಫೊಕೇಷನ್ ಆಗಿದೆ, ಅಂತಹವರಿಗೆ ಕನಿಷ್ಟ ತಾವು 60 ಸಾವಿರ ರೂಪಾಯಿಗಳನ್ನಾದರೂ ಸಹಾಯಧನ ಕೊಡಬೇಕು. ಮತ್ತು ಸಾಲಹಕ್ಕು ಪತ್ರ ಸಹಿತ ಉಪಚಾರ ಸಲುವಾಗಿ ಕನಿಷ್ಟ ಮೂರು ಸಾವಿರ ರೂಪಾಯಿಗಳನ್ನಾದರೂ ಕೊಡಲು ತಾವು ಸಹಾನುಭೂತಿ ತೋರಿಸಬೇಕು ಮತ್ತು ಹಿರೇಕೆರೂರು, ತಾಲ್ಲೂಕಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಎಕ್ಸ್ರೇ ಪ್ಲಾಂಟ್ ಸೆಟ್ ಇಲ್ಲ. ದಯವಿಟ್ಟು ಈ ಕೂಡಲೇ ಒಂದು ಎಕ್ಸ್ರೇ ಪ್ಲಾಂಟ್ ಸೆಟ್‌ಅನ್ನು ಹಿರೇಕೆರೂರ್ ತಾಲ್ಲೂಕಿನ ಮುಖ್ಯ ಆಸ್ಪತ್ರೆಗೆ ಕೊಡಬೇಕು. ಮತ್ತು ಹಿರೇಕೆರೂರಿನಲ್ಲಿರತಕ್ಕ 30 ಹಾಸಿಗೆ ಆಸ್ಪತ್ರೆಯನ್ನು 50 ಸಾವಿರ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ ಏರಿಸಬೇಕು ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಗಾಯಾಳುಗಳ ಬಗ್ಗೆ ತೀವ್ರ ಸ್ವರೂಪದ ಗಾಯಕ್ಕೆ ಮ್ಯಾಕ್ಸಿಮಮ್ ನಾವು ಪರಿಹಾರ ಕೊಡುತ್ತಿದ್ದೇವೆ. ನಾನು ವರದಿ ತರಿಸುತ್ತೇನೆ. ತರಿಸಿ ತೀವ್ರ ಗಾಯಾಳುಗಳಿಗೆ ಮತ್ತು ಬೇರೆ ರೀತಿಯ ಗಾಯಾಳುಗಳ ದಾಮಾಶೆ ಕೈಕೊಂಡು ನಾವು ಪರಿಹಾರ ಕೊಡುತ್ತೇವೆ. ಜಿಲ್ಲಾಧಿಕಾರಿಗಳಿಗೆ ಈಗಾಗಲೇ ನಾವು

ಹಾಸಿಗೆಗಳುಳ್ಳ ಆಸ್ಪತ್ರೆಯನ್ನು 50 ಹಾಸಿಗೆಗಳ ಆಸ್ಪತ್ರೆಗೆ ಮೇಲ್ದರ್ಜೆಗೆ ಏರಿಸಬೇಕು ಎಂದು ಹೇಳಿದ್ದೀರಿ. ಅದರ ಬಗ್ಗೆ ಹೇಳುವುದಾದರೆ ಎಕ್ಸ್‌ರೇ ಪ್ಲಾಂಟ್ ತಕ್ಷಣ ಕೊಡಿಸುತ್ತೇವೆ. ಆಸ್ಪತ್ರೆ ಬಗ್ಗೆ 1994-95ನೇ ಸಾಲಿನ ಏಪ್ರಿಲ್ ಮತ್ತು ಮೇನಲ್ಲಿ ಮಂಜೂರು ಮಾಡುತ್ತೇವೆ.

ಶಾಸನ ರಚನಾ ಕಾರ್ಯ ಕಲಾಪಗಳು

ಎ) ಪರ್ಯಾಲೋಚನಾ ಪ್ರಸ್ತಾವ .

ಶ್ರೀ ಚೌಡಾರೆಡ್ಡಿ (ವಸತಿ ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಅಕ್ರಮ ಕಟ್ಟಡಗಳ ಸಕ್ರಮದ ಬಗ್ಗೆ ಮಸೂದೆ ಇದೆ. ಅದನ್ನು ನಿನ್ನೆ ಮುಗಿಸಬೇಕಾಗಿತ್ತು. ಇದ್ದಕ್ಕಿದ್ದ ಹಾಗೆ ಸಭೆ ಅಜರ್ನ್ ಆಯಿತು. ನಿನ್ನೆ ನಾನು ಈ ತಿದ್ದುಪಡಿಯನ್ನು ಪರ್ಯಾಲೋಚಿಸಬೇಕೆಂದು ಸಂಕ್ಷಿಪ್ತವಾಗಿ ತಿಳಿಸಿದ್ದೇನೆ. ಇದನ್ನು ಮತಕ್ಕೆ ಹಾಕಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಇದನ್ನು ಜಾರಿ ಮಾಡಬೇಕೆಂದಿದ್ದೆವು, ನಮ್ಮ ಕೈಯಲ್ಲಿ ಆಗಲಿಲ್ಲ. ಈಗ ನೀವು ಮಾಡಿದ್ದೀರಿ, ಇದನ್ನು ನಾವು ಸ್ವಾಗತಿಸಿದ್ದೇವೆ. ಇದನ್ನು ಮತಕ್ಕೆ ಹಾಕಿ ಎಂದು ಹೇಳುತ್ತಿದ್ದೇವೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವು ಏನು ನಗರ ಪ್ರದೇಶಗಳಲ್ಲಿರುವ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸಬೇಕೆಂದು ಕಾನೂನು ತಂದಿದ್ದೀರಿ, ಅದೇ ರೀತಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಅನೇಕ ಅಕ್ರಮ ಕಟ್ಟಡಗಳನ್ನು ಸಕ್ರಮಗೊಳಿಸುವ ಕಾನೂನನ್ನು ಜಾರಿಗೆ ತಂದರೆ ಬಡವರಿಗೆ ಅನುಕೂಲವಾಗುತ್ತದೆ. ಆದುದರಿಂದ, ಈ ಕಾನೂನಿಗೆ ತಿದ್ದುಪಡಿ ತರಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ರ ಕರ್ನಾಟಕ ನಗರ ಪ್ರದೇಶದಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 9 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 9 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 9ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು.